ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಎಲ್‌ಆರ್‌ಬಿ/ 158 /2019-20 ದಿನಾಂಕ:24-02-2020.

## ಸುತ್ತೋಲೆ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಶುಶ್ರೂಷಕ. ( Sr. Staff Nurse) ಗಳಿಗೆ ಶುಶ್ರೂಷ ಅಧೀಕ್ಷಕರು ದರ್ಜೆ-2 / ಶುಶ್ರೂಷ ಬೋಧಕರು / ಉಪನ್ಯಾಸಕರು ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ : ನಿರ್ದೇಶನಾಲಯದ ಅ.ಜ್ಞಾ ಪತ್ರ ಸಂಖ್ಯೆ: ಎನ್‌ಆರ್‌ಎಸ್(2)134/2019-20 ದಿನಾಂಕ: 17.12.2019 ಅಂತಿಮ ಜೇಷ್ಠತಾ ಪಟ್ಟಿಯಂತೆ.

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಶುಶ್ರೂಷಕ, ( Sr. Staff Nurse) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಉಲ್ಲೇಖ(1)ರ ಅಧಿಕೃತ ಜ್ಞಾಪನಾ ಪತ್ರದಲ್ಲಿನ ಅನುಬಂಧ-2ರಲ್ಲಿ ಜ್ಯೇಷ್ಠತಾ ಸಂಖ್ಯೆ: 01 ರಿಂದ 07 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಅನುಬಂಧ-1 ರಲ್ಲಿ ಜ್ಯೇಷ್ಠತಾ ಸಂಖ್ಯೆ: 01 ರಿಂದ 571 ರ ವರೆಗೆ (ಹೈ-ಕ ಹೊರತುಪಡಿಸಿ) ಪ್ರಕಟಿಸಲಾಗಿದೆ. ಈ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಹಿರಿಯ ಶುಶ್ರೂಷಕ ಹುದ್ದೆಯಿಂದ ಶುಶ್ರೂಷ ಅಧೀಕ್ಷಕರು ದರ್ಜೆ-2 / ಶುಶ್ರೂಷ ಬೋಧಕರು / ಉಪನ್ಯಾಸಕರು ಹುದ್ದೆಗೆ ಆಡಳಿತ ಹಿತದೃಷ್ಟಿಯಿಂದ ಪದೋನ್ನತಿ ನೀಡಲು ಕ್ರಮಕೈಗೊಳ್ಳುವ ಸಂಬಂಧ ಜ್ಯೇಷ್ಠತಾ ಸಂಖ್ಯೆ: 01 ರಿಂದ 07 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಜ್ಯೇಷ್ಠತಾ ಸಂಖ್ಯೆ: 01 ರಿಂದ 571 ರ ವರೆಗೆ (ಹೈ-ಕ ಹೊರತುಪಡಿಸಿ) ವರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅರ್ಹ ಹಿರಿಯ ಶುಶ್ರೂಷಕರುಗಳು ಯಾವ ಹುದ್ದೆಗೆ ಪದೋನ್ನತಿ ಪಡೆಯಲು ಬಯಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕೋರಿಕೆ ಪತ್ರದೊಂದಿಗೆ, ಈ ಕೆಳಕಂಡ ದಾಖಲಾತಿಗಳನ್ನು ದಿನಾಂಕ:07.03.2020 ರೊಳಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸಲ್ಲಿಸಲು ಸೂಚಿಸಿದೆ.

1. ನೇಮಕಾತಿ ಆದೇಶ ಪ್ರತಿ.
2. ಹಿರಿಯ ಶುಶ್ರೂಷಕ ಹುದ್ದೆಗೆ ಪದೋನ್ನತಿ ಹೊಂದಿದ ಆದೇಶ ಪ್ರತಿ.
3. ಖಾಯಂಪೂರ್ವ ಸೇವಾವಧಿ ಘೋಷಣೆ ಪತ್ರ.
4. ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಹಾಗೂ ಕನ್ನಡ ಭಾಷಾ ವಿನಾಯಿತಿ ಪ್ರಮಾಣ ಪತ್ರ ನಮೂನೆ 5(5).
5. ರಾಜ್ಯ ಶುಶ್ರೂಷ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರ
6. ಡಿಪ್ಲೊಮೋ ನರ್ಸಿಂಗ್ ಪ್ರಮಾಣ ಪತ್ರ
7. ಅಂಗೀಕೃತ ವಿಶ್ವವಿದ್ಯಾನಿಲಯದಲ್ಲಿ ಪಡೆದಿರುವ ನರ್ಸಿಂಗ್ ಪದವಿ ಪ್ರಮಾಣ ಪತ್ರ
8. ಶುಶ್ರೂಷ ಬೋಧಕರ ಹಾಗೂ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಬಯಸುವವರು, ಕೋರಿಕೆ ಪತ್ರದೊಂದಿಗೆ ಎಂಎಸ್‌ಸಿ/ಬಿಎಸ್‌ಸಿ ಪದವಿ ಪ್ರಮಾಣ ಪತ್ರಗಳು ಹಾಗೂ ಎಲ್ಲಾ ಶೈಕ್ಷಣಿಕ ವಿದ್ಯಾರ್ಹತೆ ಪ್ರಮಾಣ ಪತ್ರದೊಂದಿಗೆ ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು.
9. ಉಪನ್ಯಾಸಕರ ಹುದ್ದೆಗೆ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಮತ್ತು ಜನರಲ್ ಭಾಗ-1 ಪ್ರಮಾಣ ಪತ್ರಗಳು
10. ಐದು (5) ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು 2014-15 ರಿಂದ 2018-19 ನೇ ಸಾಲಿನವರೆಗೆ **(ವಿಶೇಷ ಕಾರ್ಯನಿರ್ವಹಣಾ ವರದಿಗಳನ್ನು ಅಂಗೀಕರಿಸುವುದಿಲ್ಲ).**
11. ಇಲಾಖಾ ವಿಚಾರಣೆ / ನ್ಯಾಯಾಲಯ ಪ್ರಕರಣಗಳು/ಅನಧಿಕೃತ ಗೈರು ಹಾಜರಿ/ ಬಾಕಿ ಇಲ್ಲದ ಬಗ್ಗೆ ದೃಢೀಕೃತ ಪ್ರತಿ.
12. ಪ.ಜಾತಿ / ಪ.ಪಂಗಡದ ನೌಕರರು ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕೃತ ಜಾತಿ ಪ್ರಮಾಣ ಪತ್ರ ನೀಡುವುದು.
13. ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿ ಅಥವಾ ಸ್ಥಳೀಯೇತರ ವ್ಯಕ್ತಿ ಎಂಬುದರ ದೃಢೀಕೃತ ಪ್ರತಿ.

**ವಿಸೂ:** ನಿಗದಿತ ದಿನಾಂಕದೊಳಗೆ ಮೇಲಿನ ಎಲ್ಲಾ ದಾಖಲಾತಿಗಳನ್ನು ಸಲ್ಲಿಸುವುದು, ಸಲ್ಲಿಸದೇ ಇದ್ದ ಪಕ್ಷದಲ್ಲಿ, ಪದೋನ್ನತಿಯನ್ನು ತಿರಸ್ಕರಿಸುವುದಾಗಿ ಪರಿಗಣಿಸಲಾಗುವುದು.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಆಯುಕ್ತರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು
2. ನಿರ್ದೇಶಕರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು
4. ಡೀನ್ ಮತ್ತು ನಿರ್ದೇಶಕರು, ____________ ವಿಜ್ಞಾನ ಸಂಸ್ಥೆ,____________ಜಿಲ್ಲೆ.
5. ಎಲ್ಲಾ ಜಿಲ್ಲಾ ವಿಭಾಗೀಯ ಸಹ ನಿರ್ದೇಶಕರು, ____________ ವಿಭಾಗ,
6. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ____________ ಜಿಲ್ಲೆ
7. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ____________ ಜಿಲ್ಲೆ
8. ಪ್ರಾಂಶುಪಾಲರು, ಸರ್ಕಾರಿ ನರ್ಸಿಂಗ್ ಕಾಲೇಜು, ____________
9. ಪ್ರಾಂಶುಪಾಲರು, ಸರ್ಕಾರಿ ನರ್ಸಿಂಗ್ ಶಾಲೆ,____________
10. ಪ್ರಾಂಶುಪಾಲರು, ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರ____________
11. ಹಿರಿಯ ಪ್ರೋಗ್ರಾಮರ್, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ, ಬೆಂಗಳೂರು- ಸದರಿ ಸುತ್ತೋಲೆಯನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
12. ಕಚೇರಿ ಅಧೀಕ್ಷಕರು (ಟಪಾಲು) ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ, ಬೆಂಗಳೂರು- ಹಿರಿಯ ಶುಶ್ರೂಷಕ ವೃಂದದ ನೌಕರರು ಪದೋನ್ನತಿಗಾಗಿ ಸಲ್ಲಿಸುವ ದಾಖಲಾತಿಗಳನ್ನು ಟಪಾಲು ವಿಭಾಗದಲ್ಲಿ ಸ್ವೀಕರಿಸಿದ ದಿನಾಂಕದಂದೆ ಎಲ್ಆರ್ಟಿ ವಿಭಾಗಕ್ಕೆ ಸಲ್ಲಿಸುವುದು. ನಿಗದಿತ ಅವಧಿ ನಂತರ ನೀಡಿದಲ್ಲಿ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
13. ಕಚೇರಿ ಪ್ರತಿ.